

ಚೆನ್ನಾಗಿರುತ್ತದೆ.

## ಯಾವ ಬಣ್ಣ ಸೂಕ್ತ?

ಬಣ್ಣದ ಕುರಿತು ತಲೆಕೆಡಿಸಿಕೊಳ್ಳುವುದೇ ಬೇಡ. ಮೊದಲು ನಿಮ್ಮ ಆಯ್ಕೆಯ ದಿರಿಸಿನ ಬಣ್ಣ ನಿಮಗೆ ಸರಿ ಹೊಂದುತ್ತದೆಯಾ ಎಂದು ನೋಡಿ. ಈ ಉಡುಪು ನಿಮ್ಮದೇಹಕ್ಕೆ ತಕ್ಕಂತೆ ಹೊಂದಿಕೊಳ್ಳುವುದರಿಂದ ಯಾವುದೇ ಬಣ್ಣವಾದರೂ ಕೂಡ ಮ್ಯಾಚ್ ಆಗುತ್ತದೆ. ಇದು ರೆಗ್ಯುಲರ್ ಕುರ್ತಾದಂತೆ ಕಂಡುಬಂದರೂ ಇದರಲ್ಲಿ ನೆರಿಗೆ ಹೆಚ್ಚು ಇರುವುದರಿಂದ ಸಖತ್ ಸ್ಟೈಲ್ ಆಗಿರುತ್ತದೆ. ಈ ಡ್ರ್ಯಾಪ್‌ಗಳಿಂದ ಇದಕ್ಕೆ ಹೊಸ ಲುಕ್. ಧೋತಿ, ಪಟಿಯಾಲ, ಸಲ್ವಾರ್, ಜೀನ್ಸ್ ಜತೆ ಇದು ಚೆನ್ನಾಗಿ ಹೊಂದಿಕೆಯಾಗುತ್ತದೆ.

ಇದು ಎಲ್ಲಾ ಋತುವಿಗೂ ಹೇಳಿ ಮಾಡಿಸಿದ್ದು. ವಿಭಿನ್ನವಾದ ಬಟ್ಟೆಗಳಲ್ಲಿ ಈ ಡ್ರ್ಯಾಪ್ ಕುರ್ತಾವನ್ನು ವಿನ್ಯಾಸ ಮಾಡಲಾಗುತ್ತದೆ. ಗರಿಗರಿಯಾದ ಹತ್ತಿ ಬಟ್ಟೆ, ರೇಷ್ಮೆ, ಕಾಶ್ಮೀರ್ ಅಥವಾ ಲೆನಿನ್ ಬಟ್ಟೆ ಉಪಯೋಗಿಸಿ ವಿನ್ಯಾಸಗೊಳಿಸಲಾಗುತ್ತದೆ. ನಿಮ್ಮ ದೇಹಕ್ಕನುಗುಣವಾಗಿ ಈ ಕುರ್ತಾವನ್ನು ಆಯ್ಕೆ ಮಾಡಿ ನಂತರ ನಿಮಗೆ ಬೇಕಾದ ರೀತಿ ಕಸ್ಟಮೈಸ್ಡ್ ಮಾಡಿಕೊಳ್ಳಬಹುದು. ಮೊಣಕಾಲು ಉದ್ದದ ಕುರ್ತಾ ಚೆನ್ನಾಗಿ ಹೊಂದಿಕೆಯಾಗುತ್ತದೆ. ಆದರೆ ಈಗ ಹೆಚ್ಚಿನವರು ಅವರವರ ಅಭಿರುಚಿಗೆ ತಕ್ಕಂತೆ ಸಣ್ಣದು ಹಾಗೂ ಉದ್ದನೆಯ ಕುರ್ತಾ ಎರಡನ್ನೂ ಕೂಡ ಆಯ್ಕೆ ಮಾಡುತ್ತಿದ್ದಾರೆ.

ಇದರಲ್ಲಿ 'ವಿ' ಆಕಾರ ಕುತ್ತಿಗೆ, ಕ್ರೀವ್ ಆಕಾರದ ಕುತ್ತಿಗೆ ಬೋಟ್ ನೆಕ್ ಕೂಡ ಆಯ್ಕೆ ಮಾಡಬಹುದು. ಇದು ಬೇಸಿಗೆ ಕಾಲ ಹಾಗೂ ಚಳಿಗಾಲದ ಕಾರ್ಯಕ್ರಮಕ್ಕೆ ಹೆಚ್ಚು ಸೂಕ್ತ.

ಬೇಸಿಗೆ ಕಾಲದ ಕಾರ್ಯಕ್ರಮಗಳಿಗಾದರೆ ಹತ್ತಿ ಬಟ್ಟೆಯ ಡ್ರ್ಯಾಪ್ ಕುರ್ತಾ ಬಳಸಿದರೆ ಉತ್ತಮ. ಇನ್ನು ಚಳಿಗಾಲ್ಲಕೆ ಸಿಲ್ಕ್, ಉಣ್ಣೆಯ ಕುರ್ತಾ ಸೂಕ್ತ. ಹಾಗೇ ಬೇಸಿಗೆ ಕಾಲ, ಚಳಿಗಾಲಕ್ಕೆ ತಕ್ಕಂತೆ ಈ ದಿರಿಸಿನ ಕೈ ತೋಳಿನ ಉದ್ದ, ಕಾಲರ್ ಸ್ಟೈಲ್, ಫಿಟ್ಟಿಂಗ್ ಅನ್ನು ಬದಲಾಯಿಸಿ ಕೊಳ್ಳಬಹುದು. ಈ ಕುರ್ತಾದ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಲು ಇದರ ಮೇಲೆ ನೀವು ಶಾಲು, ಸ್ಟೋಲ್, ಸ್ಕಾರ್ವ್ಸ್ ಕೂಡ ಆಯ್ಕೆ ಮಾಡಬಹುದು.

ತುಂಬಾ ಸ್ಟೈಲಿಷ್ ಆಗಿ ಕಾಣಿಸಿಕೊಳ್ಳಬೇಕು ಎಂಬ ಹಂಬಲ ಇರುವವರು ಈ ಕುರ್ತಾದ ಮೇಲೆ ಉದ್ದನೆಯ ಜಾಕೆಟ್ ಅನ್ನು ಕೂಡ ಧರಿಸಬಹುದು. ಹಾಗೇ ಮುತ್ತಿನ ನೆಕ್ಲೇಸ್, ಎಂಬ್ರಾಯ್ಡರಿ ದುಪಟ್ಟಾ, ಸ್ಟೈಲಿಷ್ ಪಾಶ್ಮಿನಾ, ಪೇಟವನ್ನು ಕೂಡ ಹಾಕಬಹುದು.

ಮದುವೆಗೆ ಈ ಡ್ರೆಸ್ ತುಂಬಾ ಚೆನ್ನಾಗಿರುತ್ತದೆ.

### ಬಹುಬೇಡಿಕೆಯ ಉಡುಗೆ

ನಮ್ಮ ಮಳಿಗೆಯಲ್ಲಿ ಈ ಡ್ರ್ಯಾಪ್ ಕುರ್ತಾಕ್ಕೆ ಸಾಕಷ್ಟು ಬೇಡಿಕೆ ಇದೆ. ಈ ತರದ ಫ್ಯಾನ್ಸಿ ಡ್ರ್ಯಾಪ್ ಕುರ್ತಾ ತಯಾರಿಸುವಲ್ಲಿ ನಾವು ನಿಪುಣರು. 3000 ಸಾವಿರದಿಂದ 10,000ದವರೆಗೆ ಇದರ ಬೆಲೆ ಇರುತ್ತದೆ. ಬಟ್ಟೆ ಹಾಗೂ ವಿನ್ಯಾಸದ ಆಧಾರದ ಮೇಲೆ ಬೆಲೆ ಕೂಡ ನಿರ್ಧರಿತವಾಗುತ್ತದೆ. ಅದೂ ಅಲ್ಲದೆ ಕಸ್ಟಮೈಸ್ಡ್ ಡ್ರ್ಯಾಪ್ ಕುರ್ತಾವನ್ನು ಕೂಡ ನಾವು ಮಾಡಿ ಕೊಡುತ್ತೇವೆ. ಇದನ್ನು ನೆಹರು ಕೋಟ್, ಪ್ರಿನ್ಸ್ ಕೋಟ್, ಇಂಡೋ ವೆಸ್ಟರ್ನ್ ಹಾಗೂ ಶೇರ್ವಾನಿಗಳೊಂದಿಗೆ ಧರಿಸಬಹುದು. ಹಾಗೇ ಸೋಷಿಯಲ್ ಪಾರ್ಟಿ, ಮದುವೆ, ಎಂಗೇಜ್‌ಮೆಂಟ್, ಹಬ್ಬಗಳ ಸಂದರ್ಭದಲ್ಲಿ ಧರಿಸಬಹುದು. 5 ರಿಂದ 40 ವರ್ಷದವರು ನಮ್ಮ ಪ್ರಮುಖ ಗ್ರಾಹಕರಾಗಿದ್ದಾರೆ.

– ಮಹಿಪಾಲ್ ಡಿ ಜೈನ್, ವಿನ್ಯಾಸಕ

ಎರಡು ಅಥವಾ ಮೂರು ಬಟನ್ ಇರುವ ಕುರ್ತಾವನ್ನು ಆರಿಸಿ. ಈಗೀಗ ಒಂದೇ ಬಟನ್ ಇರುವ ವಿನ್ಯಾಸದ ಆಯ್ಕೆ ಕೂಡ ಹೆಚ್ಚಿದೆ.